ಮೈಸೂರು ನಗರದ ಜಲದರ್ಶಿನಿ ಮುಂಭಾಗದ ಹೇರ್‌ಪಿನ್ ತಿರುವು

೨೦೦. ಶ್ರೀ ಪಿ ಎಂ. ಚಿಕ್ಕಬೋರಯ್ಯ (ಚಾಮರಾಜ).— ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೈಸೂರು ನಗರದ ಜಲದರ್ಶಿನಿಯ ಮುಂಭಾಗದಲ್ಲಿ ಹೋಗುವ ಮೈಸೂರು, ಮಂಡಿಕೇರಿ ರಸ್ತೆಯ ತಿರುವಿನಲ್ಲಿ (ಕುಕ್ಕರಹಳ್ಳಿ ಕೆರೆಯ ಬಾಜುವಿನಲ್ಲಿರುವ ಏರ್‌ಪಿನ್ ಕರ್ವ್) ಆಗಾಗ್ಗೆ ಅಪಘಾತಗಳು ಸಂಭವಿಸಿ ಅನೇಕ ಜನ ಸಾವಿಗೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ರಸ್ತೆಯು ಚಿಕ್ಕದಾಗಿದ್ದು ೧, ೨ ಫರ್ಲಾಂಗಿನಲ್ಲಿ ೨ ತಿರುವುಗಳಿದ್ದು ವಾಹನಗಳು ಮತ್ತು ಪಾದಚಾರಿಗಳ ಸಂಚಾರಕ್ಕೆ ತೊಂದರೆಯಾಗಿರುವುದು ನಿಜವೆ;

ಇ) ಹಾಗಿದ್ದಲ್ಲಿ ಆ ರಸ್ತೆಯನ್ನು ಅಗಲ ಮಾಡಿ ನೇರ ಮಾಡಲು ಸರ್ಕಾರ ಕ್ರಮ ಕೈಗೊಳ್ಳುತ್ತದೆಯೇ;

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಈ ರಸ್ತೆಯು ೨.೭೦ ಕಿ.ಮಿ. ನಿಂದ ೩.೪೦ ಕಿ.ಮಿ. ವರೆಗಿನ ಭಾಗದಲ್ಲಿ ಒಂದು ತಿರುವು ಇರುತ್ತದೆ. ಈ ತಿರುವಿನಲ್ಲಿ ಅಪಘಾತವಾಗಿರುವುದು ಗಮನಕ್ಕೆ ಬಂದಿದೆ.

ಆ) ಮತ್ತು ಇ) ಈ ರಸ್ತೆಯು ೨.೭ ಕಿ. ಮಿ. ನಿಂದ ೩.೪ ಕಿ.ಮಿ. ವರೆಗಿನ ಭಾಗದಲ್ಲಿ ತಿರುವಿದ್ದು ವಾಹನಗಳ ಸಂಗಮವಾದ ಸಂಚಾರಕ್ಕೆ ತೊಂದರೆಯಾಗಿರುವುದು ಗಮನಕ್ಕೆ ಬಂದಿದೆ. ಈ ಭಾಗವನ್ನು ಅಗಲ ಮಾಡಿ, ತಿರುವನ್ನು ನೇರ ಮಾಡಿ, ಅಪ್ರೋಚಸ್ ಸೇರಿದಂತೆ ಹೊಸ ರಸ್ತೆಯನ್ನು ಮಾಡಲು ಸುಮಾರು ೧೮ ಲಕ್ಷ ರೂಗಳು ಬೇಕಾಗುತ್ತದೆ. ಹಣಕಾಸಿನ ಲಭ್ಯತೆಯನ್ನಾಧರಿಸಿ ಈ ರಸ್ತೆಯ ಭಾಗವನ್ನು ಅಭಿವೃದ್ಧಿ ಮಾಡುವುದನ್ನು ಪರಿಗಣಿಸಲಾಗುವುದು.

ಅಪ್ಪರ್ ತುಂಗಾ ಯೋಜನೆ.

೨೫೯. ಶ್ರೀ ಕೆ.ಬಿ. ಕೋಳಿವಾಡ್ (ರಾಣೆಬೆನ್ನೂರ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಂಗಾ ಮೇಲ್ದಂಡೆ ಯೋಜನೆ ಈಗ ಯಾವ ಹಂತದಲ್ಲಿದೆ;

ಆ) ಈ ಯೋಜನೆಯ ಕರಡನ್ನು ಕೇಂದ್ರ ಸರ್ಕಾರದ ಮನ್ನಣೆಗೆ ಕಳುಹಿಸಲಾಗಿದೆಯೇ; ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಯೋಜನೆಯ ಫೀಸಿಬಿಲಿಟಿ ವರದಿಯನ್ನು ಸಿದ್ಧಪಡಿಸಲಾಗುತ್ತಿದೆ.

ಆ) ಇಲ್ಲ, ಯೋಜನಾ ವರದಿಯು ತಯಾರಾದ ನಂತರ ಅವಶ್ಯಕ ಕ್ರಮ ತೆಗೆದುಕೊಳ್ಳಲಾಗುವುದು.

ಹುಲ್ಲಹಳ್ಳಿ ರಾಂಪುರ ನಾಲಾ ರಿಪೇರಿ ಕೆಲಸ

೩೭೧. ಶ್ರೀ ಡಿ. ಬಿ. ಜಯಶಂಕರ್ (ನಂಜನಗೂಡು).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಮತ್ತು ರಾಂಪುರ ನಾಲೆಗಳು ದುರಸ್ತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ನಾಲೆಗಳನ್ನು ದುರಸ್ತಿ ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ಹಾಗೂ ಈ ಕಾಲುವೆಗಳ ದುರಸ್ತಿಗೆ ಹಣ ಬಿಡುಗಡೆಯಾಗಿದೆಯೇ ?